ಈ ಕನಸಿನ ಬಗ್ಗೆ ಹೇಳಿಕೊಂಡಿದ್ದಾರೆ, ತೋಡಿಕೊಂಡಿದ್ದಾರೆ.

ಒಳ್ಳೇ ಆಸಕ್ತಿದಾಯಕ ವಿಷಯ, ಆದರೆ ಅಷ್ಟೇ ಅಸಂಭವನೀಯವಾದದ್ದು ಎಂದು ಡಾ. ಮಿಶ್ರಾ ಶರಾ ಹೊಡೆದರು.

ಅಂಜಲಿ ಮೌನ ವಹಿಸಬೇಕಾಯಿತು. ಅವಳಿಗೆ ಡಾ. ಮಿಶ್ರಾ ಅವರ ಸ್ವಭಾವ ಚೆನ್ನಾಗಿ ಗೊತ್ತು. ಸ್ವಲ್ಪ ಹೊತ್ತಿನ ನಂತರ ಡಾ. ಮಿಶ್ರಾ ಅವರೇ ಒಂದ್ಕೆಲಸ ಮಾಡು. ಅಮೇರಿಕದಲ್ಲಿ ಎರಡನೆಯ ದಿವಸವೂ ಆ ಕನಸನ್ನು ಕಂಡವರು ಯಾರಾದರೂ ಇದ್ದಾರೇನು ಹುಡುಕಿ ನೋಡು. ಅಕಸ್ಮಾತ್... ಎನ್ನುತ್ತಿದ್ದಂತೆಯೇ ಅವರ ಮೊಬೈಲ್ ರಿಂಗ್ ಆಯಿತು. ಅಮೇರಿಕದಲ್ಲಿರುವ ಅವರ ಮಗ ಜೈ ಫೋನ್ ಮಾಡಿದ್ದ. ಖಭೌತಶಾಸ್ತ್ರದಲ್ಲಿ ಪಿಎಚ್‌ಡಿ ಮಾಡಲು ಲಾಸ್ ಎಂಜಲೀಸ್‌ನಲ್ಲಿದ್ದ.

'ಜೈ ಬೇಟಾ, ಆರಾಮಾಗಿದ್ದೀಯಾ? ಇದೇನು ಈ ಹೊತ್ನಲ್ಲಿ ಕಾಲ್ ಮಾಡಿದ್ದು? ಲ್ಯಾಬ್‌ನಿಂದ ತಿರುಗಿ ಬಂದೆಯಾ?' ಕೇಳಿದರು.

'ಲ್ಯಾಬ್‌ನಲ್ಲೇ ಇದ್ದೀನಿ ಡ್ಯಾಡ್. ಇಲ್ಲಿ ಪರಿಸ್ಥಿತಿ ಸರಿಯಿಲ್ಲ. ಲ್ಯಾಬ್‌ನಲ್ಲೇ ನನಗೆ ನಿದ್ರೆ ಬಂದು ಬಿಟ್ಟಿತು. ಕೆಲವು ನಿಮಿಷಗಳ ಹಿಂದೆ ಎಚ್ಚರವಾಯ್ತು. ನನಗೆ ಮತ್ತದೇ ಕನಸು ಬಿದ್ದಿತ್ತು. ಫೇಸ್‌ಬುಕ್ಕಿನಲ್ಲಿ ಹಾಕ್ಬೇಕು ಅಂತ ನೋಡಿದರೆ ಅಲ್ಲಿ ಈಗಾಗಲೇ ಐವತ್ತು ಜನ ನನ್ನ ಸ್ನೇಹಿತರು ತಮ್ಮ ಕನಸಿನ ಅನುಭವ ಹಂಚಿಕೊಂಡಿದ್ದಾರೆ. ಕೆಲಸದಲ್ಲಿರುವಾಗಲೇ ಅವರಿಗೂ ಜೊಂಪು ಹತ್ತಿ ಕನಸು ಬಿದ್ದಿದೆ. ಹೀಗಾದರೆ ಹೇಗೆ ಡ್ಯಾಡ್? ನನ್ನ ರೂಮ್‌ಮೇಟ್ ಕೆವಿನ್ ಇನ್ಮೇಲೆ ಮಲಗೋದೇ ಬೇಡ ಅಂತ ಗಟ್ಟಿಯಾಗಿ ಕುಳಿತಿದ್ದಾನೆ, ಮಗ್ಗಿನಲ್ಲಿ ಕಾಫಿ ತುಂಬಿಟ್ಕೊಂಡು. ಇದೇನು ಡ್ಯಾಡ್, ಯಾಕ್ಹೀಗೆ?'

'ನೀನು ಹೆದರಿಕೋಬೇಡ, ನಾನು ಈ ಬಗ್ಗೆ ಯೋಚಿಸ್ತೀನಿ. ಕಾರ್ಯೋನ್ಮುಖನಾಗ್ತೇನೆ'.

'ಓ ಕೇ ಡ್ಯಾಡ್'.

***

17 ಏಪ್ರಿಲ್

ಜಗತ್ತಿನಾದ್ಯಂತ ಇಡೀ ಜಗತ್ತಿಗೇ ಸಮೂಹ ಸನ್ನಿ ಹಿಡಿದಂತಾಗಿತ್ತು.

ಗ್ಲೋಬಲ್ ಹೆಲ್ಯೂಸಿನೇಶನ್ ಮತ್ತು ಆಡ್ ಸ್ಲೀಪಿಂಗ್ ಟ್ರೆಂಡ್ ಗಳ ಮೊದಲ ಇಂಗ್ಲಿಷ್ ಅಕ್ಷರಗಳನ್ನು ಸೇರಿಸಿ ಈ ಘಟನೆಗೆ (ಜಿ.ಎಚ್.ಓ.ಎಸ್.ಟಿ) ಘೋಸ್ಟ್ ಅಂತ ಹೆಸರಿಟ್ಟರು.

ಈ ಘೋಸ್ಟ್ ಜನರ ನಿತ್ಯ ಜೀವನದ ಮೇಲೆ ಹೆಚ್ಚೆಚ್ಚು ಪ್ರಭಾವ ಬೀರುತ್ತಲೇ ಹೊರಟಿತು.

ಜನಸಮುದಾಯ ಭೀತಿಗೊಳಪಟ್ಟಿತು. ಕಳೆದ ಎರಡು ದಿನಗಳಲ್ಲಿ ವಿಮಾನ ಚಾಲಕರ ದಿಢೀರ್ ಜೊಂಪಿನಿಂದಾಗಿ 14 ವಿಮಾನಗಳು ಅಪಘಾತಕ್ಕೀಡಾಗಿದ್ದವು. 4500ಕ್ಕೂ ಮಿಕ್ಕಿ ಸಾವು ಸಂಭವಿಸಿದ್ದವು. ನೋವುಗಳದೆಷ್ಟೋ! ಚಾಲಕರು ಒಮ್ಮಿಂದೊಮ್ಮೆಲೆ ನಿದ್ರೆಗೊಳಗಾದರೆ ಅಪಘಾತವಾಗದಿದ್ದೀತೇ?

ಇಂಥದ್ದಕ್ಕೆಲ್ಲ ಯಾರು ಕಾರಣರಿರಬಹುದು? ಏನು ಕಾರಣ ಇರಬಹುದು?

ಒಂದು ದೇಶದವರು ತಮಗಾಗದ ಇನ್ನೊಂದು ದೇಶದ ಮೇಲೆ ಗೂಬೆ ಕೂರಿಸತೊಡಗಿದರು. ಅಮೇರಿಕದ ಮಾಧ್ಯಮದವರಂತೂ ಬಿಟ್ಟೂಬಿಡದೆ ಚೀನಾದ ಮೇಲೆ ಹರಿಹಾಯ ತೊಡಗಿದರು. ಭ್ರಮೆಗೊಳಗಾಗುವಂತೆ ಚೀನಾದವರೇನಾದರೂ ತರಂಗಗಳನ್ನು ಹರಡುತ್ತಿರಬಹುದೇ? ಏನಾದರೂ ರಾಸಾಯನಿಕಗಳನ್ನು ತಯಾರಿಸಿ... ಎಂದೆಲ್ಲಾ ಯೋಚಿಸತೊಡಗಿದರು. ಆದರೆ ಚೀನಾದ 4 ವಿಮಾನಗಳು ಅಪಘಾತಕ್ಕೊಳಗಾಗಿಬಿಟ್ಟವು ಇದೇ ಕಾರಣದಿಂದ. ಎಂದ ಮೇಲೆ ಅಮೇರಿಕದವರದು ಹುಸಿ ಆರೋಪ ಎಂದು ಸಾಬೀತಾಯಿತು.

ರಾತ್ರಿಯೆನ್ನದೆ ಹಗಲೆನ್ನದೆ ದಿನದ ಯಾವುದೇ ಕ್ಷಣದಲ್ಲಿ, ಹುಡುಗರೆನ್ನದೆ ಮುದುಕರೆನ್ನದೆ, ಹೆಂಗಸರೆನ್ನದೆ ಗಂಡಸರೆನ್ನದೆ ಜನ ಈ ಘೋಸ್ಟ್ ಪ್ರಭಾವಕ್ಕೆ ಒಳಗಾಗತೊಡಗಿದರು. ಇಡೀ ದೇಹಕ್ಕೆ ಅನಸ್ತೇಶಿಯಾ ಕೊಟ್ಟಂತೆ ಅನುಭವ ಆಗುತ್ತಿತ್ತು. ನಿದ್ದೆ ಹತ್ತಿ ಆ ಕನಸು ಬೀಳುತ್ತಿತ್ತು. ರಸ್ತೆ ರಸ್ತೆಗೆ ಅಪಘಾತಗಳು, ಸಾವು ನೋವುಗಳು. ಜನತೆ ಕಂಗೆಟ್ಟಿತು. ವಾಹನಗಳನ್ನೇರುವುದನ್ನೇ ನಿಲ್ಲಿಸಿದರು.

ಜಗತ್ತು ತಟಸ್ಥವಾಯಿತು. ಷೇರು ಮಾರ್ಕೆಟ್ ಅಲ್ಲೋಲ ಕಲ್ಲೋಲ. ಜಗತ್ತಿನ ಅರ್ಥವ್ಯವಸ್ಥೆ ಹದಗೆಟ್ಟಿತು. ಜಗತ್ತು ಅಸ್ತವ್ಯಸ್ತಗೊಂಡಿತು.

***

18 ಏಪ್ರಿಲ್,(ರಾತ್ರಿ 2 ಗಂಟೆ) ಬೆಂಗಳೂರು

ಡಾ. ಮಿಶ್ರಾ ಮತ್ತವರ ಮಗ ಜೈ ನಡುವೆ ಸಂಭಾಷಣೆ:

'ಡ್ಯಾಡ್, ಹಾಗಾದರೆ ನಿಮ್ಮ ಇನ್ವೆಸ್ಟಿಗೇಶನ್ ಪ್ರಕಾರ ನೀವು ಹೇಳುವುದು ಇಷ್ಟು ಈ ಘೋಸ್ಟ್ ಪ್ರಭಾವಕ್ಕೊಳ ಗಾದವರು ಮೊದಲ ಹತ್ತು ನಿಮಿಷ ಗಾಢನಿದ್ರೆಗೆ ಶರಣಾಗುತ್ತಾರೆ. ಪಿನ್ನಿನಿಂದ ಚುಚ್ಚಿದರೂ ಅಥವಾ ಬಕೇಟ್‌ಗಟ್ಟಲೆ ತಣ್ಣೀರು ಸುರುವಿದರೂ ಅವರು ಎಚ್ಚರಾಗೋದಿಲ್ಲ.'

'ಕರೆಕ್ಟ್. ಮಿದುಳಿನಿಂದ ಸಂಬಂಧವನ್ನೇ ಕಳಚಿಕೊಂಡಿರುತ್ತವೆ ಸ್ಪರ್ಶೇಂದ್ರಿಯಗಳು. ಅರ್ಧ ತಾಸಿನವರೆಗೆ ಇದೇ ಅವಸ್ಥೆ. ನನ್ನ ನಿರೀಕ್ಷಣೆ ಅಭಿಪ್ರಾಯಗಳನ್ನು ಲಂಡನ್ನಿನಲ್ಲಿರುವ ನನ್ನ ಸಹೋದ್ಯೋಗಿ ಡಾ. ಮಾರ್ಟಿನ್ ಅವರಿಗೂ ತಿಳಿಸಿದ್ದೇನೆ. ಅವರ ಟೀಮ್ ಕೂಡ ಇದೇ ರೀತಿಯ ಪ್ರಯೋಗಗಳನ್ನು ಮಾಡಿದೆ. ಯಾವ ರಾಸಾಯನಿಕಗಳ ಅವಶೇಷಗಳೂ ಪತ್ತೆಯಾಗಿಲ್ಲ. ಅಂಥದ್ದೇನಾದರೂ ಪತ್ತೆಯಾಗಿದ್ದರೆ ಎಲ್ಲರೂ ಒಂದೇ ವೇಳೆಗೆ ಗಾಢನಿದ್ರೆಗೆ ಶರಣಾಗಿ ಬಿಡುತ್ತಿದ್ದರು.'

'ಇನ್ನು ಆ ಕನಸಿನ ಬಗೆಗೇನು ನಿಮ್ಮ ಅಭಿಪ್ರಾಯ? ನಿಮಗೇನಾದರೂ ಅಂಥ ಕನಸು ಬಿದ್ದಿತ್ತೇ?'

'ಬಿದ್ದಿತ್ತು. ಅದೇ ಕನಸು. ಕಳೆದ ರಾತ್ರೀನೇ ಬಿದ್ದಿತ್ತು. ಆ ಸಮಯದಲ್ಲಿ ಕನಸು ಕಾಣ್ತಿದ್ದೇವೆ ಅಂತನೇ ಅನಿಸೋದಿಲ್ಲ. ನಮ್ಮ ಪ್ರಜ್ಞೆ ಆ ಸಮಯಯದಲ್ಲಿ ಕೆಲಸ ಮಾಡುವುದಿಲ್ಲ. ಆ ನೆರಳಿನಾಕೃತಿಗೆ ನಾವು ಏನಾದರೂ ತಿರುಗಿ ಹೇಳಬೇಕೆಂದರೆ ಸಾಧ್ಯ ಆಗುವುದೇ ಇಲ್ಲ.'

'ನಿಮ್ಮ ಪ್ರಕಾರ ಘೋಸ್ಟ್ ಆಕ್ರಮಣಕ್ಕೆ ಏನು ಕಾರಣ ಇರಬಹುದು?'

'ಅದೇ ಗೊತ್ತಾಗ್ತಾ ಇಲ್ಲ. ಮನುಕುಲದ ಇತಿಹಾಸದಲ್ಲಿ ಇಂಥದ್ದು ಇದೇ ಮೊದಲು. ನ್ಯೂರೋಸೈನ್ಸ್ ಮಿತಿಗೆ ಮೀರಿದ ವಿಷಯ ಇದು. ಪ್ರಜ್ಞೆಯ ಬಗ್ಗೆ ನಾವು ಇದುವರೆಗೆ ತಿಳಿದುಕೊಂಡಿದ್ದು ಅಲ್ಪ, ತೀರ ಅಲ್ಪ. ಪ್ರತಿಯೊಬ್ಬರಿಗೂ ಅದೇ ಕನಸು ಬೀಳುವುದೆಂದರೆ ಇದೊಂದು ವಿಲಕ್ಷಣ ವಿಶೇಷ. ಯಾವ ರೀತಿ ಯೋಚಿಸಿದರೂ ಈ ಘಟನೆಗಳಿಗೆ ಕಾರಣ ಗೊತ್ತಾಗುತ್ತಿಲ್ಲ. ಆದರೂ ನಾನು ಸುಮ್ಮನೆ ಕೂಡ್ರುವುದಿಲ್ಲ, ಏನಾದರೂ ಒಂದು ಪರಿಹಾರ ಕಂಡು ಹಿಡಿದೇ ಹಿಡಿಯುತ್ತೇನೆ.'

'ನಿಮ್ಮ ಬಗ್ಗೆ ನನಗೆ ಭರವಸೆಯಿದೆ ಡ್ಯಾಡ್'

'ನೀನು ಧೈರ್ಯದಿಂದಿರು'

'ಓಕೆ ಡ್ಯಾಡ್'

***

ದಿನಗಳು ಒಂದಾದ ನಂತರ ಒಂದು ಕಳೆಯತೊಡಗಿದವು. ಘೋಸ್ಟ್ ಆಕ್ರಮಣ ಹೆಚ್ಚಾಗುತ್ತ ಹೊರಟಿತೇ ವಿನಃ ನಿಲ್ಲಲಿಲ್ಲ. ವಿಜ್ಞಾನದ ಎಲ್ಲಾ ಶಾಖೆಗಳ ಪರಿಣಿತರು ಕೈಚೆಲ್ಲಿ ಕುಳಿತರು. ಕನಸುಗಳ ಆವರ್ತನವೂ ಹೆಚ್ಚಾಗತೊಡಗಿತು. ಜನತೆ ವಿಹ್ವಲಗೊಂಡಿತು. ಎಲ್ಲಿ ಏನು ತಪ್ಪಿದೆ, ಯಾರು ಎಲ್ಲಿ ನಮ್ಮನ್ನು ಆಟ ಆಡಿಸುತ್ತಿದ್ದಾರೆ? ಏನದೆಲ್ಲಾ... ಹುಚ್ಚುಚ್ಚಾರ ಕಲ್ಪನೆಗಳಿಂದ ಜನತೆ ರೋಸಿಹೋಯಿತು. ಪ್ರಯೋಗ ಮಾಡಿ ಮಾಡಿ ನೋಡಬೇಕೆಂದರೆ ವಿಜ್ಞಾನಿಗಳೂ ನಿದ್ರಾವಶ! ಮುಂದಿನ ಮೂವತ್ತು ನಿಮಿಷ ತೂಕಡಿಕೆ!

ಜಗತ್ತಿನ ಪ್ರತಿಯೊಬ್ಬ ವ್ಯಕ್ತಿ ಈ ಸಮಸ್ಯೆಯಿಂದ ಪೀಡಿತ. ಜಗತ್ತೇ ಒಂದು ಪ್ರಯೋಗ ಶಾಲೆ, ಮನುಷ್ಯರೆಲ್ಲ ಪ್ರಯೋಗಪಶುಗಳು! ದೂರದಲ್ಲೆಲ್ಲೋ ಕುಳಿತ ಯಾವನೋ ಒಬ್ಬ ಮಹಾ ವಿಜ್ಞಾನಿ ಇಲ್ಲಿನದೆಲ್ಲ ನಿಯಂತ್ರಿಸುತ್ತಿದ್ದಾನೆ ಅನ್ನಿಸತೊಡಗಿತು.

ಜನಸಾಮಾನ್ಯರ ಜೀವನ ಶೋಚನೀಯವಾಗತೊಡಗಿತು. ಯಾರೂ ಯಾವ ವಾಹನಗಳನ್ನೂ ಹತ್ತುವಂತಿಲ್ಲ. ಸೈಕಲ್ಲುಗಳೂ ಮೂಲೆಗುಂಪಾದವು. ವಾಹನ ನಡೆಸುವಾಗ ಘೋಸ್ಟ್ ಆಕ್ರಮಿಸಿದರೆ...? ಎಂಬ ಭಯ! ಅಮೇರಿಕದವರು ತಯಾರಿಸಿದ ಡ್ರೈವರ್ ಇಲ್ಲದ ಕಾರುಗಳಿಗೆ ಒಮ್ಮಿಂದೊಮ್ಮೆಲೆ ಡಿಮಾಂಡ್ ಬಂದುಬಿಟ್ಟಿತು. ಆದರೆ ಅವರಾದರೂ ಎಷ್ಟು ತಯಾರಿಸಲು ಸಾಧ್ಯ? ಕ್ಯಾಲಿಫೋರ್ನಿಯಾದವರ ಬೇಡಿಕೆಯನ್ನೇ ನೀಗಿಸಲಾಗುತ್ತಿರಲಿಲ್ಲ.

ವಾಹನ ಸೌಕರ್ಯವೇ ಇಲ್ಲವೆಂದಾದ ಮೇಲೆ ಆಹಾರ ಪೂರೈಕೆ ಆಗುವುದಾದರೂ ಹೇಗೆ? ಕನಿಷ್ಠ ಮಟ್ಟದಲ್ಲಾದರೂ ಆಹಾರ ಪೂರೈಸೋಣ ಎಂದು ನಾಲ್ಕಾರು ಡ್ರೈವರುಗಳನ್ನು ಕರೆದುಕೊಂಡು ಹೋಗತೊಡಗಿದರು. ಗಣ್ಯ ಅತಿಗಣ್ಯ ವ್ಯಕ್ತಿಗಳ ಪ್ರಯಾಣಕ್ಕೂ ನಾಲ್ಕಾರು ಜನ ಡ್ರೈವರುಗಳನ್ನು ನೇಮಿಸಬೇಕಾಯಿತು.

ಕನಿಷ್ಠ ಪ್ರಮಾಣದಲ್ಲಿ ಕೂಡ ಆಹಾರ ಪೂರೈಕೆ ಆಗದ್ದರಿಂದ ಜನತೆ ಕಂಗಾಲಾದರು. ಜಗಳಾಟ ಬಡಿದಾಟಗಳು ತಾರಕಕ್ಕೇರಿದವು. ಶಾಲೆ ಕಾಲೇಜು,